ಶ್ರೀ ಎಸ್. ಬಂಗಾರಪ್ಪ.—ನಾನಾಗೇ ಹೋಗಿ ಕಾಲೇಜನ್ನು ಮಾಡುತ್ತೇನೆ ಎನ್ನುವ ಮಾತನ್ನು ನಾನಂ ಎಂದು ಆಡಿಲ್ಲ. ಪ್ರಶ್ನೆಗಳನ್ನು ಕೇಳಿದಾಗ ಸಂಬಂಧಪಟ್ಟ ಸಚಿವನಾಗಿ ನಾನು ಉತ್ತರ ಕೊಡ ಬೇಕಾಗುತ್ತದೆ. ಈ ವಿಚಾರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎನ್ನುತಕ್ಕ ಮಾತನ್ನು ನಾನು ಹೇಳಿದ್ದೇನೆ. ಮೊನ್ನೆ ಕೂಡ ವಿಧಾನ ಪರಿಷತ್ತಿನಲ್ಲಿ ನಾನು ಹೇಳಿದ್ದೇನೆ. ಇದು ಶಿವಮೊಗ್ಗ ಒಂದೆ ಅಲ್ಲ. ಬಿಜಾಪುರ, ಮಂಡ್ಯ ಇಲ್ಲಿ ಕೃಷಿ ಕಾಲೇಜುಗಳನ್ನು ಪ್ರಾರಂಭ ಮಾಡಬೇಕೆಂದು ಮೂಡಿಗೆರೆಯಲ್ಲಿ ತೋಟ ಗಾರಿಕೆಯ ಡಿಗ್ರಿ ಕಾಲೇಜನ್ನು ಪ್ರಾರಂಭ ಮಾಡಬೇಕೆಂದು ಇದೆ. ಈ ನಾಲ್ಕು ಕಾಲೇಜುಗಳ ಬಗ್ಗೆ ಇದೇ ಅಕಾಡೆಮಿಕ್ ವರ್ಷದಲ್ಲೇ ಪ್ರಾರಂಭ ಮಾಡುವುದಕ್ಕೋಸ್ಕರ ಈಗಾಗಲೇ ಸಿದ್ಧತೆಗಳನ್ನು ಮಾಡಿ ಕೊಂಡಿದ್ದೇವೆ. ಎರಡೂ ಕೃಷಿ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳು, ಕಾರ್ಯದರ್ಶಿಗಳೂ ಹಾಗೂ ನಾವು ಜೊತೆಯಲ್ಲಿ ಕುಳಿತುಕೊಂಡು ಚರ್ಚೆ ಮಾಡಿ ತೀರ್ಮಾನ ಮಾಡಿ ಈಗಾಗಲೇ ಅದರ ಬಗ್ಗೆ ಸೂಚನೆಯನ್ನು ಕೊಟ್ಟಿದ್ದೇನೆ. ಆದರೆ ಇವನ್ನು ಪ್ರಾರಂಭ ಮಾಡಬೇಕೆಂದರೆ ತಮಗೆ ಹಣಕಾಸಿನ ವಿಚಾರ ಗೊತ್ತಿದೆ. ಯಾವುದೇ ಪಕ್ಷದ ಸರ್ಕಾರ ಇದ್ದರೂ ಕೂಡ ಇದನ್ನು ವಿಚಾರ ಮಾಡಿ, ಪ್ರಾರಂಭ ಮಾಡ ಬೇಕು. ಆ ವಿಚಾರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಇದೇ ಅಕಾಡೆಮಿಕ್ ಇಯರ್‌ನಲ್ಲಿ ಪ್ರಾರಂಭ ಮಾಡುವ ಉದ್ದೇಶ ಇರುವಾಗ ಎಷ್ಟು ತೀವ್ರತೆ ಸರ್ಕಾರಕ್ಕೆ ಇದೆ ಎಂಬುದನ್ನು ಮಾನ್ಯ ಸದಸ್ಯರು ಗ್ರಹಿಸಿದ್ದೀರಿ ಎಂದು ನಾನು ಭಾವಿಸುತ್ತೇನೆ. ತಮಗೆ ಎಷ್ಟು ತೀವ್ರತೆ ಇದೆ ಅಷ್ಟೇ ತೀವ್ರತೆ ಇಟ್ಟುಕೊಂಡು ನಾವು ಕೆಲಸ ಮಾಡುತ್ತಿದ್ದೇವೆ. ಕೃಷಿ ಇಲಾಖೆಯ ಬೇಡಿಕೆ ಚರ್ಚೆಗೆ ಬಂದಾಗ ಅದರ ಬಗ್ಗೆ ಅಂತಿಮನಿರ್ಣಯವನ್ನು ಹೇಳತಕ್ಕದ್ದು ಸಾಧ್ಯ ಇದೆ ಎಂಬುದನ್ನು ತಮಗೆ ಗಮನಕ್ಕೆ ತರುತ್ತಿದ್ದೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಿಕ್ಷಕರಂಗಳ ಕೊರತೆ.

೧೦೩೩. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಪ್ರೌಢಶಾಲೆಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಪ್ರೌಢಶಾಲೆಗಳಲ್ಲಿ ಈಗ ಇರುವ ಅಧ್ಯಾಪಕರ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

ಇ) ಈ ಪ್ರೌಢಶಾಲೆಗಳಿಗೆ ಮಂಜೂರಾದ ಅಧ್ಯಾಪಕರ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

ಈ) ವಿದ್ಯಾರ್ಥಿಗಳ ಪ್ರಮಾಣಕ್ಕನುಗುಣವಾಗಿ ಕೊರತೆ ಇರುವ ಅಧ್ಯಾಪಕರ ಸಂಖ್ಯೆ ಎಷ್ಟು ? ತಾಲ್ಲೂಕುವಾರು ವಿವರ ನೀಡುವುದು)

ಉ) ಈ ಅಧ್ಯಾಪಕರ ಕೊರತೆಯನ್ನು ಯಾವಾಗ ನೀಗಿಸಬಹುದು ?

ಶ್ರೀ ಕೆ.ಎಚ್. ರಂಗನಾಥ್ (ಶಿಕ್ಷಣ ಸಚಿವರು).—

ಅ) ೧೩೪ ಸರ್ಕಾರಿ ಪ್ರೌಢ ಶಾಲೆಗಳು (ಪಟ್ಟಿ ಲಗತ್ತಿಸಿದೆ)

ಆ) ೧೦೩೧ ಶಿಕ್ಷಕರು (ಪಟ್ಟಿ ಲಗತ್ತಿಸಿದೆ).

ಇ) ೧೩೯ ಅಧ್ಯಾಪಕರ ಹುದ್ದೆಗಳು ಮಂಜೂರಾಗಿವೆ (ಪಟ್ಟಿ ಲಗತ್ತಿಸಿದೆ)

ಈ) ೩೬೮ ಅಧ್ಯಾಪಕರ ಕೊರತೆ ಇದೆ. (ಪಟ್ಟಿ ಲಗತ್ತಿಸಿದೆ)

ಉ) ಆದಷ್ಟು ಶೀಘ್ರವಾಗಿ ಬಗೆ ಹರಿಸಲಾಗುವುದು

ದಕ್ಷಿಣ ಕನ್ನಡ ಜಿಲ್ಲೆಯ ಸರಕಾರಿ ಪ್ರೌಢ ಶಾಲೆಗಳು ೧೩೪

ತಾಲ್ಲೂಕುವಾರು	ಪ್ರೌಢಶಾಲೆಗಳ ಸಂಖ್ಯೆ	ಮಂಜೂರಾದ ಹುದ್ದೆಗಳು	ಕರ್ತವ್ಯನಿರ್ವಹಿಸುತ್ತಿರುವವರು	ಖಾಲಿ ಹುದ್ದೆಗಳು.
ಮಂಗಳೂರು ತಾಲ್ಲೂಕು	೨೦	೨೪೦	೧೪೦	೬೦
ಉಡುಪಿ ತಾಲ್ಲೂಕು	೨೭	೩೧೯	೨೦೬	೧೧೩
ಬಂಟ್ವಾಳ ತಾಲ್ಲೂಕು	೧೨	೧೫೯	೯೦	೬೯
ಕುಂದಾಪುರ ತಾಲ್ಲೂಕು	೨೧	೨೬೦	೨೦೭	೫೩
ಪುತ್ತೂರು ತಾಲ್ಲೂಕು	೯	೧೦೨	೭೭	೨೫
ಸುಳ್ಯ ತಾಲ್ಲೂಕು	೧೩	೧೨೫	೧೦೩	೨೨
ಬೆಳ್ತಂಗಡಿ ತಾಲ್ಲೂಕು	೧೬	೧೦೧	೭೧	೩೦
ಕಾರ್ಕಳ ತಾಲ್ಲೂಕು	೧೬	೧೨೩	೯೭	೨೬
ಒಟ್ಟು	೧೩೪	೧೫೯೯	೧೦೩೧	೩೬೮

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.— ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನನಗೆ ಕೊಟ್ಟಿರತಕಕ ಉತ್ತರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೩೬೮ ಪ್ರೌಢಶಾಲಾ ಅಧ್ಯಾಪಕರ ಕೊರತೆ ಇದೆ ಎಂದು ತಿಳಿಸಿದ್ದಾರೆ. ಆದರೆ ಇದೇ ಸಂದರ್ಭದಲ್ಲಿ ಈ ವರ್ಷ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆದರಲ್ಲೂ ಕುಂದಾಪುರ ತಾಲ್ಲೂಕಿನಲ್ಲಿ ಹಲವಾರು ಅಧ್ಯಾಪಕರುಗಳು ಆ ಜಿಲ್ಲೆಯನ್ನು ಬಿಟ್ಟು ಬೇರೆ ಕಡೆಗಳಿಗೆ ವರ್ಗಾವಣೆಯಾಗಿದ್ದಾರೆ. ಅದಕ್ಕೆ ಬದಲಿ ವ್ಯವಸ್ಥೆ ಮಾಡುತ್ತೇವೆಂದು ಈ ವರ್ಗಾವಣೆ ಮಾಡಲಾಗಿದೆ. ಆದ್ದರಿಂದ ಇದನ್ನು ಸರಿಪಡಿಸುವಂಥ ಕಾರ್ಯಕ್ರಮ ತಾವು ತೆಗೆದುಕೊಂಡಿದ್ದೀರಾ ? ಈಗಾಗಲೇ ೧೯೮೮-೮೯ ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನ ಮತಿಯಂದ ಸುಮಾರು ೧೯ ಪ್ರೌಢಶಾಲೆಗಳನ್ನು ತೆರೆಯಲಾಗಿದೆ. ಅವುಗಳಿಗೆ ತಾವು ಅನುಮತಿಯನ್ನು ಕೊಟ್ಟಿದ್ದೀರಾ ?

ಶ್ರೀ ಕೆ. ಹೆಚ್. ರಂಗನಾಥ್.— ಮಾನ್ಯ ಅಧ್ಯಕ್ಷರೆ, ಮೊನ್ನೆ ನಡೆದಂತಹ ವರ್ಗಾವಣೆಯಲ್ಲಿ ಈ ತರಹ ಪರಿಸ್ಥಿತಿ ಆಗಿದೆ. ನಾವು ವರ್ಗಾವಣೆ ಮಾಡಿದ್ದೇವೆ, ಬದಲಿ ವ್ಯವಸ್ಥೆ ಬಗ್ಗೆ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಉಪಧ್ಯಾಯರನ್ನು ಒದಗಿಸುತ್ತೇವೆ ಮತ್ತು ಮಾನ್ಯ ಸದಸ್ಯರು ಜಿಲ್ಲಾ ಪರಿಷತ್ತಿನವರು ಪ್ರಾರಂಭ ಮಾಡಿರತಕ್ಕಂಥ ಶಾಲೆಗಳ ಬಗ್ಗೆ ತಿಳಿಸಿದ್ದಾರೆ. ನಾನು ಇದೇ ೨೯ನೇ ತಾರೀಖು ಎಲ್ಲಾ ಜಿಲ್ಲಾ ಪರಿಷತ್ತುಗಳ ಅಧ್ಯಕ್ಷರ ಸಭೆಯನ್ನು ಕರೆದಿದ್ದೇವೆ. ಆದು ಆದಮೇಲೆ ಬಹಳ ಮಟ್ಟಿಗೆ ಅವರಿಗೆ ಅನುಮತಿ ಕೊಡತಕ್ಕ ಕ್ರಮ ಕೈಗೊಳ್ಳುತ್ತೇವೆ. ಮುಂದೆ ಅವರು ಮಾಡಬೇಕಾದರೆ ನಾಳೆ ನಾವು ಏನು ತೀರ್ಮಾನ ತೆಗೆದುತೆಗೆದುಕೊಳ್ಳುತ್ತೇವೊ ಆ ತೀರ್ಮಾನದ ಪ್ರಕಾರ ಅವರು ಮಾಡಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಮಾನ್ಯ ಅಧ್ಯಕ್ಷರೇ, ಉಪಾಧ್ಯಾಯರ ಸಂಖ್ಯೆ ಬಹಳ ಕಡಿಮೆ ಇರತಕ್ಕ ಪರಿಸ್ಥಿತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೇಗೆ ಇದೆಯೋ ಹಾಗೆಯೇ ಇತರೆ ಜಿಲ್ಲೆಗಳಲ್ಲಿಯೂ ಇದೇ ಪರಿಸ್ಥಿತಿ ಇದೆಯೇ, ಇದ್ದರೆ ಅದಕ್ಕೆ ಏನು ಪರಿಹಾರ ಮಾಡಿದ್ದೀರ ? ನಾನು ಈಗಾಗಲೇ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ೨ ಹೈಸ್ಕೂಲ್‌ಗಳಲ್ಲಿ ಒಂದೇಕಡೆ ೧೧-೧೨ ಉಪಾಧ್ಯಾಯರುಗಳ ಹುದ್ದೆಗಳು ಖಾಲಿ ಇದೆ. ಇನ್ನೊಂದು ಕಡೆ ೮ ಉಪಾಧ್ಯಾಯರ ಹುದ್ದೆಗಳು ಖಾಲಿ ಇದೆ. ಈ ಖಾಲಿ ಇರತಕ್ಕ ಸ್ಥಳಗಳನ್ನು ಪರಿಶೀಲನೆ ಮಾಡಿ ಭರ್ತಿ ಮಾಡುವುದಕ್ಕೆ ತುಮಕೂರು ಜಿಲ್ಲೆ ಹಾಗೂ ಇತರೆ ಜಿಲ್ಲೆಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತೀರ.

ಶ್ರೀ ಕೆ. ಹೆಚ್. ರಂಗನಾಥ್.— ಇಂತಹ ಪರಿಸ್ಥಿತಿ ಎಲ್ಲಾ ಜಿಲ್ಲೆಗಳಲ್ಲಿಯೂ ಇದೆ. ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ನಿಗಾವಹಿಸಿ ಕ್ರಮ ಕೈಗೊಳ್ಳುತ್ತೇನೆ.